ಎರಡೇಟು ಹೊಡೆದಿದ್ದ. ಅದೇ ಕೊನೆ, ಇನ್ನಾವತ್ತು ಒಬ್ಬನ ಕೈ ಕೆಳಗೆ ಕೆಲಸ ಮಾಡಬಾರದಂತ ತೀರ್ಮಾನಿಸಿ ಮನೆ ಸೇರಿಕೊಂಡಿದ್ದ. ದುಡಿಮೆಯಿಲ್ಲದೆ ಮನೆಯಲ್ಲಿ ಉಂಬಾ ಮುದ್ದೆಗೆ ಬಂಡಾಟ ಆದಾಗ ಏನು ಕೆಲಸ ಮಾಡಬೇಕಂತ ಗೊತ್ತಾಗದೆ ಗೊಂದಲದಲ್ಲಿರುವಾಗ, ಒಂದು ದಿನ ಊರಿನ ಬಸ್‌ಸ್ಟಾಂಡ್ ಕಡೆ ಹುಲಿ-ಆಕಳದ ಹದಿನೆಂಟು ಮನೆಯ ಕಲ್ಲಳ್ಳಿನ ಆಟ ಆಡೋಕೆಂದು ಬಂದ. ಅಲ್ಲಿ ತನಗೆ ಗೊತ್ತಿರುವ ಪರಿಚಯವಿದ್ದ ಖಾಸಿಮಣ್ಣ ಎತ್ತಿನ ಕಾಲಿಗೆ ಲಾಲ್ ಕಟ್ಟುತ್ತಿರುವುದನ್ನು ನೋಡಿ, ತನ್ನ ಪರಿಸ್ಥಿತಿ ಹೇಳಿಕೊಂಡ. ಆತನಿಗೂ ಒಬ್ಬ ಸಹಾಯಕ ಬೇಕಾಗಿದ್ದರಿಂದ ಕೆಲಸಕ್ಕೆ ಕರಕೊಂಡ. ಆತನ ಹತ್ತಿರ ಕೆಲಸ ಕಲಿತ ಮೇಲೆ ತಾನೆ ಸ್ವಂತಕ್ಕೆ ಲಾಲ್ ಕಟ್ಟೋಕೆ ಹೋಗಲು ಶುರುಮಾಡಿದ. ಅದು ಹಾಗೇ ಮುಂದುವರೆದು, ಮುನಿಯಜ್ಜನಿಂದ ಮಗ ಗಿಡ್ಡಹನುಮಪ್ಪನಿಗೆ, ಆತನಿಂದ ಆತನ ಮಗ ಮಂಜಣ್ಣನಿಗೆ ಬಳುವಳಿಯಾಗಿ ಬಂದಿತ್ತು.

ಆ ಕೇರಿಯಲ್ಲಿ ಎಲ್ಲರಿಗಿಂತ ಭಿನ್ನವಾದ ಕೆಲಸ ಮಾಡ್ತ ಕೈತುಂಬಾ ಸಂಪಾದಿಸುತ್ತಾ ಸ್ವಲ್ಪ ತೂಕದ ಮನುಷ್ಯ ಅನಿಸಿಕೊಂಡಿದ್ದ ಗಿಡ್ಡಹನುಮಪ್ಪನ ಜಾಡು ಮಗ ಮಂಜಣ್ಣನೂ ಕಲಿತಿದ್ದರಿಂದ ಆದಾಯ ಚೆನ್ನಾಗಿತ್ತು. ಆ ಊರಿನ ಮಣೆಗಾರರ ಹಟ್ಟಿಯಲ್ಲಿ ಮಾಳಿಗೆ ಮನೆ ಕಟ್ಟಿಸಿದ್ದೇ ಮುನಿಯಜ್ಜ. ಅದಕ್ಕೆ ಅವರಿಗೆ ಮಾಳಿಗೆ ಮನೆಯವರು ಅಂತ ಕರೆಯುತ್ತಿದ್ದರು. ಆ ಹಟ್ಟಿಗೆ ಮೊದಲು ಸೈಕಲ್, ರೇಡಿಯೊ ತಂದಿದ್ದೇ ಗಿಡ್ಡಹನುಮಪ್ಪ. ಮಗ ಮಂಜಣ್ಣ ಟಿ.ವಿ.ತಂದ ನಂತರ ಬೈಕ್ ತಂದ. ಹೀಗೆ ಇಡೀ ಕೇರಿಗೆ ಅನೇಕ ಮೊದಲುಗಳನ್ನು ತಂದ ಗಿಡ್ಡಹನುಮಪ್ಪ, ಹಾಗೂ ಮಂಜಣ್ಣನ ಮೇಲೆ ಕೆಲವರಿಗೆ ಅಭಿಮಾನವಿತ್ತು. ಇನ್ನೂ ಕೆಲವರಿಗೆ ಸಹಜವಾಗಿ ಹೊಟ್ಟೆಕಿಚ್ಚಿತ್ತು. ಹೊಟ್ಟೆಕಿಚ್ಚಿನವರ ಬಗ್ಗೆ ತಲೆಕೆಡಿಸಿಕೊಳ್ಳದ ಮಂಜಣ್ಣ ತಾನಾಯ್ತು ತನ್ನ ಕೆಲಸ ಆಯ್ತು ಅಂತಿರುತ್ತಿದ್ದ. ಆದರೆ ತನ್ನ ಕೇರಿಯವರಿಗೆ ಏನಾದ್ರು ತೊಂದರೆಯಾದರೆ ಮಾತ್ರ ಮಂಜಣ್ಣನ ಮುಂದಾಳತ್ವ ಇರುತ್ತಿತ್ತು. ಆಗೆಲ್ಲ ಊರ ಜನರ ಕೆಂಗಣ್ಣಿಗೆ ಗುರಿಯಾಗುತ್ತಿದ್ದ. ಇವನು ದುಡ್ಡಿನ ದೌಲತ್ತು ತೋರುಸ್ತಾನೆ ಕಣ್ರೊ, ಇವನ ಹತ್ರ ಯಾರೂ ಲಾಲ್ ಕಟ್ಟಿಸ ಬಾರದಂತ ಮಾತಾಡಿಕೊಂಡರೂ ಅನಿವಾರ್ಯವಾಗಿ ಅವನ ಹತ್ತಿರಾನೇ ಕಟ್ಟಿಸಬೇಕಾಗಿತ್ತು. ಆ ರೀತಿ ಮಗನ ಸ್ವಾಭಿಮಾನದ ಬದುಕಿಗೆ ಒಂದು ದಾರಿ ತೋರಿಸಿಕೊಟ್ಟಿದ್ದ ಗಿಡ್ಡಹನುಮಪ್ಪ ಮೂರು ದಿನದ ಹಿಂದೆ ಪ್ರಕೃತಿ ಪಾಲಾಗಿದ್ದ.

ನನ್ನ ಮಗ ಒಬ್ಬಂಟಿಗ, ನಾನು ಸತ್ತಮೇಲೆ ಅವನು ವನತಿಪ್ಪು ಪಡಬಾರದು ಅಂತೇಳಿ ಗಿಡ್ಡಹನುಮಪ್ಪ ಗುರುಬೋಧ ತಗಂಡಿದ್ದ. ಆತ ತೀರಿಕೊಂಡಾಗ ಗುರುಬೋಧ ತಗಂಡ ಇತರೆ ಜಾತಿಯ ಗುರುಪುತ್ರರೆಲ್ಲ ಸೇರಿಕೊಂಡು ಯಾವುದೇ ಬಿಗ್ಬಿಂದ್ರ ಮಾಡದೆ ಅವರ ಸಂಪ್ರದಾಯದಂತೆ ಆತನಿಗೆ ಪಲ್ಲಕ್ಕಿ ತರ ಸಿಡಿಕೆ ಕಟ್ಟಿ, ಅದರಲ್ಲಿ ಧ್ಯಾನಸ್ಥ ಸ್ಥಿತಿಯಲ್ಲಿ ಕುಳ್ಳಿರಿಸಿ ಹೊತ್ತು ಸಾಗಿದ್ದರು. ಮಸಣದಲ್ಲಿ ಮನೆಯೂ ಸಹ ಭಿನ್ನವಾಗಿ ಮಾಡಿದ್ದರು. ಆರಡಿ ಮೂರಡಿ ಕುಣಿ ತೋಡಿದ ಮೇಲೆ ದರಿ ಕುಸಿದು ಬೀಳಬಾರದೆಂದು ಒಳಗಡೆ ಇಟ್ಟಿಗೆಯಿಂದ ಗೋಡೆ ಕಟ್ಟಿ, ಅದರಲ್ಲಿ ಗಿಡ್ಡಹನುಮಪ್ಪನ್ನ ಉತ್ತರ ದಿಕ್ಕಿಗೆ ಮುಖಮಾಡಿ ಧ್ಯಾನಸ್ಥ ಸ್ಥಿತಿಯಲ್ಲೇ ಕೂರಿಸಿ ಪೂಜೆ ಮಾಡಿದ ಮೇಲೆ ಮಣ್ಣು ಕೊಡೋದರ ಬದಲಾಗಿ ಹೂವು ಉದುರಿಸಿದ ನಂತರ ಬಂಡೆ ಹಾಸಿದ್ದರು. ಅದರ ಮೇಲೆ ಮಣ್ಣು ಹಾಕಿ ಗುಟ್ಟೆ ತರ ಮಾಡಿದ್ದರು.

ಇವತ್ತು ಸಂಜೆ ನಾಕುಗಂಟೆ ಹೊತ್ತಲ್ಲಿ ಗಿಡ್ಡಹನುಮಪ್ಪನ ಗುಟ್ಟೆ ಹತ್ತಿರ ಹೋಗಿ ಮೂರು ದಿನದ ಹಿಂಡುಕೂಳಿನ ಎಡೆ ಹಾಕಿ, ಕಾಗೆ ಮುಟ್ಟೋ ತನಕ ಕಾದುಕೊಂಡಿದ್ದು, ಮುಟ್ಟಿದ ಮೇಲೆ ಹಟ್ಟಿಗೆ ವಾಪಾಸ್ ಬಂದಿದ್ದರು. ಬಂದವರು ಮನೆಯೊಳಗಡೆ ಹೋಗದಂಗೆ ಮೊದಲು ಸಿಡಿಕೆಗೆ ಹೆಗಲು ಕೊಟ್ಟ ನಾಲ್ಕು ಜನಕ್ಕೆ ನೀರೊಯ್ದು ಒದ್ದೆ ಬಟ್ಟೆಯಲ್ಲೆ ಅವರ ಕೈಗೆ ಸಣ್ಣದೊಂದು ಮುದ್ದೆ ಕೊಟ್ಟು, ಅದರ ನಡುವೆ ಸಾರು ನಿಲ್ಲುವಷ್ಟು ಕುದುರು ಮಾಡಿಕೊಂಡಿದ್ದ ಜಾಗಕ್ಕೆ ಒಂದು ಸೌಟಿನೋಟು ಸಾರೊಯ್ದು ಉಣ್ಣಾಕಿಟ್ಟಿದ್ರು. ಮಂಜಣ್ಣನಾದಿಯಾಗಿ ಆತನ ಚಿಗದೊಡಪ್ಪನ ಮಕ್ಕಳು ಸೇರಿ ನಾಲ್ಕುಜನ ಹೆಗಲು ಭಾರ ಇಳಿಸಿಕೊಳ್ಳುವ ಶಾಸ್ತ್ರ ಮುಗಿಸಿಕೊಂಡು ಬಟ್ಟೆ ಬದಲಿಸುವಷ್ಟೊತ್ತಿಗೆ ಗಾಳಿ ಮಳೆ ಎದ್ದೇ ಬಿಟ್ಟಿತ್ತು. ಅಪ್ಪನಿಲ್ಲದ ಮನೆಯಲ್ಲಿ ಅನಾಥ ಭಾವನೆ ಅನುಭವಿಸುತ್ತಿದ್ದ ಮಂಜಣ್ಣನಿಗೆ, ಹೆಂಡತಿ ಮನೆ ಸೋರೋ ವಿಚಾರ ಮಾತಾಡಿ ಸಿಟ್ಟು ತರಿಸಿದ್ದರಿಂದ ಮಳೆನಿಂತ ನಂತರ ಹೊರಗಡೆ ಬಂದು ತಿಪ್ಪೇಶಪ್ಪನ ಹತ್ತಿರ ಮಾತಾಡ್ತ ನಿಂತಿದ್ದ.

ಅದೇ ಸಮಯಕ್ಕೆ ತನ್ನ ಕೇರಿಯ ಕರಿಯಜ್ಜ ತಮಟೆನ